# <u>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ</u>

ಮಾನ್ಯ ಶ್ರೀ **ಗುಡದಯ್ಯ ರಾಮಪ್ಪ ಕೊಪ್ಪದ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:**18-01-2020 ರಂದು ಶನಿವಾರ 11-30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

## <u>ಸಭೆಗೆ ಹಾಜರಿದ್ದ ಸದಸ್ಯರು</u>

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಅಧ್ಯಕ್ಷರು |
| 2 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ಉಪಾಧ್ಯಕ್ಷರು |
| 3 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ಸದಸ್ಯರು |
| 4 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 5 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 6 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 7 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ,, |
| 8 | ಶ್ರೀ ನೀಲಪ್ಪ ಈರಪ್ಪ ಹತ್ತಿ | ,, |
| 9 | ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 10 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 11 | ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ | ,, |

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

## ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |
| 2 | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾ.ಅ.ಯೋ. ಗದಗ | ಅಭಿಯಂತರರು |

ವಿಷಯ ನಂ-1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ-1) ದಿನಾಂಕ: 04-01-2020 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ<br>
ಅನುಮೋದಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ

ವಿಷಯ ನಂ–2) 2019–20 ನೇ ಸಾಲಿನ **ಡಿಸೆಂಬರ** ತಿಂಗಳ ಸಮಿತಿಯ ಆದಾಯ–ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ–2) 2019–20 ನೇ **ಸಾಲಿನ ಡಿಸೆಂಬರ** ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2019 ನೇ ಸಾಲಿನ ಡಿಸೆಂಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 1.50%<br>ಬ) ಜಾನುವಾರು ಮಾ.ಶುಲ್ಕ | 1930813–00<br>1232–00 | 1 | ರಾಜ್ಯ ಸಂಚಿತ ನಿಧಿ ವಂತಿಕೆ (ಫೆಬ್ರುವರಿ–19 ರಿಂದ ಮೇ–19 ತಿಂಗಳ) | 353304–00 |
| | | | 2 | ಕೃಷಿ ಮಾರಾಟ ಮಂಡಳಿ ವಂತಿಕೆ (ಫೆಬ್ರುವರಿ–19 ರಿಂದ ಮೇ–19 ತಿಂಗಳ) | 117768–00 |
| | ಒಟ್ಟು ರೂ. | **1932045–00** | 3 | ಕೃಷಿ ವಿಶ್ವ ವಿದ್ಯಾಲಯ ವಂತಿಕೆ (ಫೆಬ್ರುವರಿ–19 ರಿಂದ ಮೇ–19 ತಿಂಗಳ) | 23553–00 |
| 2 | ಶುದ್ಧ ನೀರಿನ ಘಟಕ | 7870–00 | 4 | ಆವರ್ತ ನಿಧಿ ವಂತಿಕೆ (ಫೆಬ್ರುವರಿ–19 ರಿಂದ ಮೇ–19 ತಿಂಗಳ) | 938361–00 |
| 3 | ಫಾರ್ಮ್ ಫೀ | 3000–00 | 5 | ಭದ್ರತಾ ಸಿಬ್ಬಂದಿ ವೆಚ್ಚ (2019 ನವ್ಹಂಬರ್ ತಿಂಗಳ) | 205154–00 |
| 4 | ದಂಡ | 44840–00 | 6 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 10792–00 |
| | | | 7 | ಕಛೇರಿ ನಿರ್ವಹಣೆ | 71801–00 |
| | | | 8 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| | | | 9 | ದಿನಪತ್ರಿಕೆ | 450–00 |
| | | | 10 | ಅಂಚೆ ಮತ್ತು ತಂತಿ | 120–00 |
| | | | 11 | ಸಾದಿಲ್ವಾರ ವೆಚ್ಚ | 441–08 |
| | | | 12 | ದೂರವಾಣಿ ವೆಚ್ಚ | 8852–00 |
| | | | 13 | ವಿದ್ಯುತ್ ವೆಚ್ಚ | 28024–00 |
| | | | 14 | ಜೀಪ ಇಂಧನ ಮತ್ತು ದುರಸ್ತಿ | 8873–00 |
| | | | 15 | ಅಭಿವೃದ್ಧಿ ಕಾಮಗಾರಿ ವೆಚ್ಚ (ನಿಯಮ 71 ರಡಿ) | 99474–00 |
| | **ಒಟ್ಟು ರೂ.** | **19,87,755–00** | | **ಒಟ್ಟು ರೂ.** | **18,71,467–08** |
| | **ಕೊರತೆ** | – | | **ಉಳಿತಾಯ** | **1,16,287–92** |
| | **ಅಂತೂ** | **19,87,755.00** | | **ಅಂತೂ** | **19,87,755–00** |

ಸೂಚಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ
ಅನುಮೋದಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ

ವಿಷಯ ನಂ–3) ಸಮಿತಿಯ 2020–21 ನೇ ಸಾಲಿನ ಬಜೆಟ್ ಮಂಜೂರಾತಿ ಕುರಿತು.

ಠರಾವ ನಂ–3) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇದರ 2020–21 ನೇ ಸಾಲಿನ ಅಂದಾಜು ಪತ್ರಿಕೆಗಳನ್ನು ಕಾರ್ಯದರ್ಶಿಯವರು ತಯಾರಿಸಿ ಸಭೆಯಲ್ಲಿ ಮಂಡಿಸಲಾಯಿತು. ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಸಾಮಾನ್ಯ ನಿಧಿ ಹಾಗೂ ಖಾಯಂ ನಿಧಿ ಅಂದಾಜು ಪತ್ರಿಕೆಯನ್ನು ಈ ಕೆಳಗೆ ತೋರಿಸಿದಂತೆ ಒಪ್ಪಿಗೆ ನೀಡಲಾಯಿತು ಹಾಗೂ ಸದರಿ ಅಂದಾಜು ಪತ್ರಿಕೆಗಳಿಗೆ ಸಕ್ಷಮ ಪ್ರಾಧಿಕಾರಿಗಳ ಮಂಜೂರಾತಿ ಪಡೆಯಲು ತೀರ್ಮಾನಿಸಲಾಯಿತು.

| | | |
|---|---|---|
| ಅ) | **ಸಾಮಾನ್ಯ ನಿಧಿ:**<br>**ಆದಾಯ** | |
| | 1. ಮಾರುಕಟ್ಟೆ ಶುಲ್ಕ | 1,91,00,000-00 |
| | 2. ಲೈಸನ್ಸ ಶುಲ್ಕ | 1,43,390-00 |
| | 3. ಇತರೆ ಬಾಬ್ತುಗಳು | 12,87,000-00 |
| | | **2,05,30,390-00** |
| ಬ) | **ಖರ್ಚು** | |
| | 1. ಎಲ್ಲಾ ಸಾಮಾನ್ಯ ನಿಧಿ ವೆಚ್ಚದ ಬಾಬ್ತುಗಳು | 1,39,05,777-00 |
| | 2. 2020-21 ನೇ ಸಾಲಿಗಾಗಿ ಅಂದಾಜು ಉಳಿತಾಯ | 66,24,613-00 |
| | **ಖಾಯಂ ನಿಧಿ:**<br>1. 2017-18 ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ನಬಾರ್ಡ ಯೋಜನೆಯಡಿ ಮಂಜೂರಾದ ಅಭಿವೃದ್ದಿ ಕಾಮಗಾರಿಗಳಿಗೆ ಹಾಗೂ ನಿಯಮ 71 ರಡಿ ಕಾಮಗಾರಿಗಳಿಗೆ ಬೇಕಾಗುವ ಮೊತ್ತ. | 80,71,987-00 |
| | **2. ಉಳಿತಾಯ ಮೊತ್ತ** | **13,34,090-00** |

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ

ವಿಷಯ ನಂ-4) ನಿಯಮ 71 ರಡಿಯಲ್ಲಿ ಕೃ.ಉ.ಮಾ.ಸ. ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿಯ ಸಭಾ ಭವನ/ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೇವರ್ಸ್) ಕಲ್ಲು ಜೋಡಿಸುವುದು ಹಾಗೂ ಮುಂದಿರುವ ಕಂಪೌಂಡಿಗೆ ಚಿಕ್ಕ-ಪುಟ್ಟ ದುರಸ್ತಿ ಮಾಡಿ, ಬಣ್ಣ ಬಳಿಯುವ ಕಾಮಗಾರಿ ಕೈಕೊಳ್ಳುವ ಬಗ್ಗೆ.

ಠರಾವ ನಂ-4) ಕೃಉಮಾಸ ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿಯ ಸಭಾ ಭವನ/ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೇವರ್ಸ್) ಕಲ್ಲು ಜೋಡಿಸುವುದು ಹಾಗೂ ಮುಂದಿರುವ ಕಂಪೌಂಡಿಗೆ ಚಿಕ್ಕ-ಪುಟ್ಟ ದುರಸ್ತಿ ಮಾಡಿ, ಬಣ್ಣ ಬಳಿಯುವ ಕಾಮಗಾರಿ ನಿರ್ಮಿಸುವುದು ಅವಶ್ಯಕವೆಂದು ಮನಗಂಡು ಈ ಕೆಳಗಿನಂತೆ ನಿಯಮ 71 ರಡಿಯಲ್ಲಿ ಕಾಮಗಾರಿಯನ್ನು ಕೈಕೊಳ್ಳಲು ತಿರ್ಮಾನಿಸಲಾಯಿತು. ಹಾಗೂ ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಂದ ಅಂದಾಜು ಪತ್ರಿಕೆಯನ್ನು ತಯಾರಿಸಿ ನಿಯಮಾನುಸಾರ ಮೇಲ್ಕಾಣಿಸಿದ ಕಾಮಗಾರಿಯನ್ನು ಮಾಡಿಸಲು ನಿರ್ಣಯಿಸಲಾಯಿತು.

| **ಕಾಮಗಾರಿ ಹೆಸರು** |
|---|
| ಕೃ.ಉ.ಮಾ.ಸ. ಲಕ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿಯ ಸಭಾ ಭವನ/ಟೆಂಡರ್ ಹಾಲ್ ಕಟ್ಟಡದ ಮುಂದುಗಡೆ ನೆಲಹಾಸು (ಫೇವರ್ಸ್) ಕಲ್ಲು ಜೋಡಿಸುವುದು ಹಾಗೂ ಮುಂದಿರುವ ಕಂಪೌಂಡಿಗೆ ಚಿಕ್ಕ-ಪುಟ್ಟ ದುರಸ್ತಿ ಮಾಡಿ, ಬಣ್ಣ ಬಳಿಯುವ ಕಾಮಗಾರಿ ಕೈಕೊಳ್ಳುವ ಕುರಿತು. (ನಿಯಮ-71 ರಡಿ) |

ಸೂಚಕರು: ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ

ವಿಷಯ ನಂ–5) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

ವಿಷಯ ನಂ–5(1) ಸಮಿತಿಯ 2020–21 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆ ಕುರಿತು ಚರ್ಚಿಸುವುದು.

ಠರಾವ ನಂ–5(1) ಸಮಿತಿಯ ಹಿಂದಿನ ಸಾಲುಗಳಲ್ಲಿಯ ವಾರ್ಷಿಕ ಕ್ರೀಯಾ ಯೋಜನೆಯಡಿ ಮಂಜೂರಾದ ಕಾಮಗಾರಿಗಳು ಪೂರ್ಣಗೊಳಿಸಲು ಸಮಿತಿಯ 2020–21 ನೇ ಸಾಲಿಗೆ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಹಣಕಾಸಿನ ಲಭ್ಯತೆ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ ಎಂದು ಸಭೆಗೆ ಕಾರ್ಯದರ್ಶಿಯವರು ವಿವರಿಸಿ ಹೇಳಿದರು.

ಮೇಲಿನ ಎಲ್ಲ ಅಂಶವನ್ನು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ಮಾರುಕಟ್ಟೆಯನ್ನು ಮಾದರಿ ಮಾರುಕಟ್ಟೆಯನ್ನಾಗಿ ಮಾಡಲು ಅವಶ್ಯಕವಿರುವ ಕಾಮಗಾರಿಗಳನ್ನು ಕೈಕೊಳ್ಳಲು ಸಮಿತಿಯ 2020–21 ನೇ ಸಾಲಿನ ನಿರೀಕ್ಷಿತ ಆದಾಯಲ್ಲಿ, ಈಗಾಗಲೇ ಮಂಜೂರಾಗಿರುವ ಕಾಮಗಾರಿಗಳನ್ನು ಕೈಕೊಳ್ಳಲು ಅವಶ್ಯಕವಾಗಿರುವುದನ್ನು ಮನಗಂಡು 2020–21 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಕೆಳಗಿನಂತಿರುವ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲು ಹಾಗೂ ಈ ಕುರಿತು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರ ಇವರಿಂದ 2020–21 ನೇ ಸಾಲಿನ ಕ್ರಿಯಾ ಯೋಜನೆಗೆ ಮಂಜೂರಾತಿ ಪಡೆಯಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಅನುಬಂಧ–2**

ಭಾಗ–1(ಅ)

ಈ ಹಿಂದಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾತಿ ನೀಡಿ ಟೆಂಡರಗಳನ್ನು ಕರೆಯದ ಕೈಬಿಡಲು ಉದ್ದೇಶಿಸಿದ ಕಾಮಗಾರಿಗಳು.

| **ಕ್ರ. ಸಂ** | **ಕಾಮಗಾರಿಯ ಹೆಸರು** | **ಅನುಮೋದಿತ ರೇಖಾ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ** | **ಅನುಮೋದನೆ ನೀಡಿದ್ದ ವಾರ್ಷಿಕ ಕ್ರಿಯಾ ಯೋಜನೆ ವರ್ಷ** |
|---|---|---|---|
| 1 | ಮುಖ್ಯ ಮಾರುಕಟ್ಟೆ ಪ್ರಾಂಗಣದ ದಕ್ಷಿಣ ಭಾಗದಲ್ಲಿ ಕಂಪೌಂಡ ಗೋಡೆ ನಿರ್ಮಿಸುವುದು. | 20–00 | 2017–18 |
| 2 | ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 60 ಎಂ.ಟಿ ಸಾಮರ್ಥ್ಯದ ಇಲೆಕ್ಟ್ರಾನಿಕ್ ವೇಬ್ರಿಡ್ಜ ನಿರ್ಮಿಸುವುದು. | 17–00 | 2017–18 |

**ಭಾಗ–1(ಆ)**

**<u>2020–21 ನೇ ಸಾಲಿನಲ್ಲಿ ಪ್ರಾಂಗಣ ಸಂಭಂಧಿಸಿದ ಮುಂದುವರೆದ ಕಾಮಗಾರಿಗಳು</u>**

**(ತಾಂತ್ರಿಕ ಮಂಜೂರಾತಿ ಪಡೆದಿದ್ದು ಟೆಂಡರ್ ಕರೆಯಬೇಕಾದ ಕಾಮಗಾರಿಗಳು)**

| **ಕ್ರ. ಸಂ** | **ವಾಕ್ರಿಯೋ ವರ್ಷ** | **ಕಾಮಗಾರಿಯ ಹೆಸರು** | **ಕಾಮಗಾರಿಯನ್ನು ಪೂರ್ಣಗೊಳಿಸಲು 2020–21 ನೇ ಸಾಲಿಗೆ ಅಗತ್ಯವಾದ ಮೊತ್ತ ರೂ.ಲಕ್ಷಗಳಲ್ಲಿ** |
|---|---|---|---|
| 1 | 2 | 3 | 4 |
| 1 | 2017–18 | ಶಿರಹಟ್ಟಿ ಉಪ ಮಾರುಕಟ್ಟೆಯಲ್ಲಿ 10 ದಿನಸಿ ಮಳಿಗೆಗಳನ್ನು ನಿರ್ಮಿಸುವುದು. | 30–00 |
| 2 | 2017–18 | ಶಿರಹಟ್ಟಿ ಉಪ ಮಾರುಕಟ್ಟೆಯಲ್ಲಿಯ 6 ದಿನಸಿ ಮಳಿಗೆ ಹಾಗೂ ಕ್ಯಾಂಟೀನ ಕಟ್ಟಡವನ್ನು ಸುಧಾರಣೆ ಮಾಡುವುದು ಹಾಗೂ ಸುಣ್ಣ ಬಣ್ಣ ಹಚ್ಚುವದು. | 5–00 |
| | | **ಒಟ್ಟ ರೂ.** | **ರೂ. 35–00** |

**ಭಾಗ-1(ಇ)**

**2020-21 ನೇ ಸಾಲಿನಲ್ಲಿ ನಿಯಮ 60(ಸಿ) ರಡಿಯಲ್ಲಿ ಇತರೆ ಮುಂದುವರೆದ ಕಾಮಗಾರಿಗಳು.**

| ಕ್ರ ಸಂ | ವಾಕ್ರಿಯೋ ವರ್ಷ | ಕಾಮಗಾರಿಯ ಹೆಸರು | ಕಾಮಗಾರಿಯನ್ನು ಪೂರ್ಣಗೊಳಿಸಲು 2020-21 ನೇ ಸಾಲಿಗೆ ಅಗತ್ಯವಾದ ಮೊತ್ತ ರೂ.ಲಕ್ಷಗಳಲ್ಲಿ |
|---|---|---|---|
| | -- | -- | -- |

**ಭಾಗ-1(ಈ)**

**2020-21 ನೇ ಸಾಲಿನಲ್ಲಿ ನಿಯಮ 60(ಸಿ) (8) ರಡಿಯಲ್ಲಿ ಇತರೆ ಮುಂದುವರೆದ ಕಾಮಗಾರಿಗಳು.**

| ಕ್ರ ಸಂ | ವಾ.ಕ್ರಿ.ಯೋ ವರ್ಷ | ಕಾಮಗಾರಿಯ ಹೆಸರು | ಕಾಮಗಾರಿಯನ್ನು ಪೂರ್ಣಗೊಳಿಸಲು 2020-21 ನೇ ಸಾಲಿಗೆ ಅಗತ್ಯವಾದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|
| | -- | -- | -- |

**ಭಾಗ-2ಬಿ**

**2020-21ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮು.ಮಾ ಪ್ರಾಂಗಣ/ಉಪ ಪ್ರಾಂಗಣಕ್ಕೆ ಸಂಬಂಧಿಸಿದ ಉದ್ದೇಶಿತ ಹೊಸ ಕಾಮಗಾರಿಗಳು**

| ಕ್ರ. ಸಂ | ಕಾಮಗಾರಿಯ ಹೆಸರು | ರೇಖಾ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1. | ಮುಖ್ಯ ಮಾರುಕಟ್ಟೆ ಪ್ರಾಂಗಣದ ಪಶ್ಚಿಮ ಭಾಗದ ಜಾನುವಾರು ಮಾರುಕಟ್ಟೆಗೆ ಹೊಂದಿಕೊಂಡ ಬಾಕಿ ಉಳಿದಿರುವ ರಸ್ತೆಗೆ ಸಿ.ಸಿ. ಮಾಡುವುದು ಹಾಗೂ ಗಟಾರು ನಿರ್ಮಿಸುವ ಕಾಮಗಾರಿ | 100-00 |
| 2. | ಮುಖ್ಯ ಮಾರುಕಟ್ಟೆ ಪ್ರಾಂಗಣದ ದಕ್ಷಿಣ ಭಾಗದಲ್ಲಿ ಕಂಪೌಂಡ ಗೋಡೆ ನಿರ್ಮಿಸುವುದು. | 20-00 |
| 3 | ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 60 ಎಂ.ಟಿ ಸಾಮರ್ಥ್ಯದ ಇಲೆಕ್ಟ್ರಾನಿಕ್ ವೇಬ್ರಿಡ್ಜ ನಿರ್ಮಿಸುವುದು. | 22-00 |
| | **ಒಟ್ಟು ರೂ.** | **142-00** |

ಸಭೆಯಲ್ಲಿ ಈ ಕುರಿತು ಸುಧೀರ್ಘವಾಗಿ ಚರ್ಚಿಸಿ ಕಾಮಗಾರಿಗಳ ಅವಶ್ಯಕತೆ ಮೇರೆಗೆ ಮತ್ತು ಲಭ್ಯವಾಗುವ ಸಮಿತಿಯ ನಿಧಿ ಅನುಸಾರ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಣಯಿಸಿ, ಮೇಲಿನಂತೆ ಮುಂದುವರೆದ ಕಾಮಗಾರಿಗಳ ಮೊತ್ತ ರೂ. 35-00 ಲಕ್ಷಗಳ ಸೇರಿದಂತೆ 2020-21 ನೇ ಸಾಲಿಗೆ, ಉದ್ದೇಶಿತ ಹೊಸ ಕಾಮಗಾರಿಗಳ ಮೊತ್ತ ಒಟ್ಟು ರೂ. 142-00 ಹೀಗೆ ಒಟ್ಟು ರೂ. 177-00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿರುವದನ್ನು ಸಭೆಯಲ್ಲಿ ಅಂಗೀಕರಿಸಿ, ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರ ಇವರ ಮಂಜೂರಾತಿ ಪಡೆಯಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ವಿಷಯ ನಂ–5(2) ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 02 ಸಂಖ್ಯೆ ಗೋದಾಮುಗಳನ್ನು ಲೀವ್ & ಲೈಸನ್ಸ್ ಫೀ ತಳಹದಿಯ ಮೇಲೆ ಹಂಚಿಕೆ ಮಾಡಲು ಕೋರಿ ಶ್ರೀ ಮಾಲತೇಶ ಅಗ್ರೋ ಇಂಡಸ್ಟ್ರೀಜ್ ವರ್ತಕರು, ಸಾ: ಲಕ್ಷ್ಮೇಶ್ವರ ಹಾಗೂ ಶ್ರೀ ಮಾಲತೇಶ ಕಾಟನ್ ಅಗ್ರೋ ಇಂಡಸ್ಟ್ರೀಜ್ ವರ್ತಕರು, ಸಾ: ಲಕ್ಷ್ಮೇಶ್ವರ ಇವರು ವಿನಂತಿಸಿಕೊಂಡು ಸಲ್ಲಿಸಿರುವ ಅರ್ಜಿ ಕುರಿತು ವಿಚಾರ.

ಠರಾವ ನಂ–5(2) ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 02 ಸಂಖ್ಯೆ ಗೋದಾಮುಗಳನ್ನು ಪ್ರತಿ ಒಂದಕ್ಕೆ ಮಾಸಿಕ ರೂ. 6500–00 ಲೀವ್ & ಲೈಸನ್ಸ್ ಫೀ (ಬಾಡಿಗೆ) ತಳಹದಿಯ ಮೇಲೆ ಹಂಚಿಕೆ ಮಾಡಲು ಶ್ರೀ ಮಾಲತೇಶ ಅಗ್ರೋ ಇಂಡಸ್ಟ್ರೀಜ್ ವರ್ತಕರು, ಸಾ:ಲಕ್ಷ್ಮೇಶ್ವರ ಹಾಗೂ ಶ್ರೀ ಮಾಲತೇಶ ಕಾಟನ್ ಅಗ್ರೋ ಇಂಡಸ್ಟ್ರೀಜ್ ವರ್ತ–ಕರು, ಸಾ:ಲಕ್ಷ್ಮೇಶ್ವರ ಇವರು ವಿನಂತಿಸಿಕೊಂಡು ಸಲ್ಲಿಸಿರುವ ಅರ್ಜಿಯನ್ನು ಕಾರ್ಯದರ್ಶಿ–ಯವರು ಸಭೆಯಲ್ಲಿ ವಿವರಿಸಿದರು. ಮುಂದುವರೆದು, ಸದರಿ ಗೋದಾಮುಗಳಿಗೆ ರೂ.12050–00 ಮಾಸಿಕ (ಪ್ರತಿ ಒಂದಕ್ಕೆ) ಲೀವ್ & ಲೈಸನ್ಸ್ ಫೀ ನಿಗಧಿಯಾಗಿದ್ದು, ಗೋದಾಮುಗಳ ಹಂಚಿಕೆಗಾಗಿ ನಿಯಮಾನುಸಾರ 02 ಬಾರಿ ಟೆಂಡರ್ ಅವ್ಹಾನಿಸಿದ್ದು, ಯಾರೊಬ್ಬರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ, ಹಾಗೂ ಆಸ್ತಿ ಹಂಚಿಕೆ ನಿಯಮಾ–ವಳಿಗಳು 2004 ರನ್ವಯ ಟೆಂಡರ್ ಪ್ರಕಟಣೆ ಹೊರಡಿಸಿ ಹಂಚಿಕೆ ಕ್ರಮವಹಿಸ–ಬಹುದಾಗಿದೆಂದು ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಚರ್ಚಿಸಲಾಯಿತು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಗೋದಾಮುಗಳಿಗೆ 02 ಬಾರಿ ಟೆಂಡರ್ ಅವ್ಹಾನಿಸಿದರು ಹೆಚ್ಚಿನ ಲೀವ್ & ಲೈಸನ್ಸ್ ಫೀ ನಿಗಧಿಯಾದ ಪ್ರಯುಕ್ತ ಯಾರೋಬ್ಬರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲವೆನ್ನುವುದನ್ನು ಮನಗಂಡು ಹಾಗೂ ಸದರಿ ಗೋದಾಮು–ಗಳು ಸುಮಾರು ವರ್ಷಗಳಿಂದ ಖಾಲಿ ಬಿದ್ದು ಹಾಳಾಗುತ್ತಿರುವುದನ್ನು ಮನಗಾಣಲಾಯಿತು. ಪ್ರಸ್ತುತ ಸದರಿ ಗೋದಾಮುಗಳನ್ನು ವರ್ತಕರು ಹಂಚಿಕೆ ಮಾಡಲು ಕೋರಿರುವುದನ್ನು ಪರಿಶೀಲಿಸಿ, ಹಂಚಿಕೆ ಮಾಡುವುದರಿಂದ ಸಮಿತಿಗೆ ಆದಾಯವು ಆಗುವುದುನ್ನು ಮತ್ತು ಗೋದಾಮುಗಳು ಸುಸ್ಥಿಯಲ್ಲಿ ಇರಬಹುದಾಗಿದೆಂದು ಮನಗಂಡು 2004 ರ ಆಸ್ತಿ ಹಂಚಿಕೆ ನಿಯಮಗಳಲ್ಲಿರುವ ಷರತ್ತುಗಳನ್ವಯ ಟೆಂಡರ್ ಅಹ್ವಾನಿಸಿ ಹಂಚಿಕೆ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ವಿಷಯ ನಂ–5(3) ಉಚ್ಚ ನ್ಯಾಯಾಲಯದ ಧಾರವಾಡದಲ್ಲಿ ಸಮಿತಿಯ ಪರವಾಗಿ ವಾದಿಸಲ ವಕೀಲರನ್ನು ನೇಮಿಸುವ ಕುರಿತು.

ಠರಾವ ನಂ–5(3) ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ಸರ್ವೆ ನಂಬರ–89/2ಎ ಕ್ಕೆ ಸಂಬಂದಪಟ್ಟಂತೆ, ಭೂಸ್ವಾಧೀನಪಡಿಸಿಕೊಂಡ 5 ಎಕರೆ 37 ಗುಂಟೆ ಜೊತೆಗೆ 1 ಎಕರೆ ಹೆಚ್ಚುವರಿ ಜಮೀನು ಭೂಸ್ವಾಧೀನ ಆಗಿರುವುದನ್ನು ಮರಳಿ ಭೂ ಮಾಲೀಕರಿಗೆ ನೀಡಲು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಆದ ಆದೇಶದ ವಿರುದ್ಧ, ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡದಲ್ಲಿ ಧಾಖಲಿಸಿದ ದಾವೆ ಆರ್.ಎಸ್.ಎ. 100355/2016 ಮತ್ತು ಡಬ್ಲ್ಯೂ.ಪಿ ನಂ–100356/2018 2 ಪ್ರಕರಣಗಳಲ್ಲಿ ಪ್ರಸ್ತುತ ಸಮಿತಿಯ ಪರವಾಗಿ ಶ್ರೀ ಮಲ್ಲಿಕಾರ್ಜುನ ಸಿ. ಬಸವರೆಡ್ಡಿ ವಕೀಲರು ಇವರು ವಾದಿಸುತ್ತಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಮಿತಿಯ ಪರ ವಾದಿಸಲು ಹಾಗೂ ಅವಶ್ಯವಿರುವ ಕಾನೂನು ಸಲಹೆಗಳನ್ನು ಪಡೆದುಕೊಳ್ಳಲು ಶ್ರೀ ಮಲ್ಲಿಕಾರ್ಜುನ ಸಿ. ಬಸವರೆಡ್ಡಿ ಇವರ ಬದಲಾಗಿ ಮತ್ತೊಬ್ಬ ನ್ಯಾಯವಾದಿಯವರನ್ನು ನೇಮಿಸಿಕೊಳ್ಳಬೇಕಾಗಿದ್ದನ್ನು ಕಾರ್ಯದರ್ಶಿಯವರು

ಸಭೆಗೆ ವಿವರಿಸುತ್ತಾ, ನಮ್ಮ ಇಲಾಖೆಯ ಪ್ಯಾನಲ್‌ನಲ್ಲಿರುವ ನ್ಯಾಯವಾದಿಗಳ ಪಟ್ಟಿಯಲ್ಲಿದ್ದ ವಕೀಲರ ವಿವರಗಳನ್ನು ಸಹ ಸಭೆಗೆ ವಿವರಿಸಲಾಯಿತು.

ಸಭೆಯಲ್ಲಿ ಈ ಕುರಿತು ಚರ್ಚಿಸಿ ಮೇಲ್ಕಾಣಿಸಿದ 2 ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದಲ್ಲಿ ಸಮಿತಿಯ ಪರವಾಗಿ ವಾದಿಸಲು ಶ್ರೀ ಬಿ. ಆನಂದಶೆಟ್ಟಿ, ನ್ಯಾಯವಾದಿಗಳು ಸಾ:ಬೆಳಗಾವಿ ಇವರನ್ನು ಸಮಿತಿಯ ವಕೀಲರನ್ನಾಗಿ ನೇಮಿಸಿಕೊಳ್ಳಲು ಹಾಗೂ ಸುತ್ತೋಲೆ ಅನುಸಾರ ಕಾನೂನು ಶುಲ್ಕ ಪಾವತಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

**ವಿಷಯ ನಂ-5(4)** ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 09 ದಿನಸಿ ಮಳಿಗೆಗಳು ನಿರ್ಮಿಸುವ ಕುರಿತು ಟೆಂಡರ್ ಕರೆಯುವ ಬಗ್ಗೆ.

**ಠರಾವ ನಂ-5(4)** ಸನ್ 2017-18 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆಯಲ್ಲಿ ಮಂಜೂರ ಆಗಿರುವ ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 09 ದಿನಸಿ ಮಳಿಗೆಗಳು ನಿರ್ಮಿಸುವದು ಹಾಗೂ ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿಯ 06 ದಿನಸಿ ಮಳಿಗೆಗಳು ಹಾಗೂ ಕ್ಯಾಂಟೀನ್ ಕಟ್ಟಡ ಸುಧಾರಣೆ ಮಾಡುವ ಕಾಮಗಾರಿಗಳನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಗುತ್ತಿಗೆದಾರರಿಗೆ ಮೀಸಲಾತಿ ಮಾಡಲು ದಿನಾಂಕ: 13-01-2018 ರ ಠರಾವ ಸಂಖ್ಯೆ-7(2) ರಲ್ಲಿ ತೀರ್ಮಾನಿಸಿರುವುದನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಮುಂದುವರೆದು ಇ-ಪೋರ್ಟಲ್‌ನಲ್ಲಿ 5 ಹಾಗೂ ಮೇಲ್ಪಟ್ಟು ಕಾಮಗಾರಿಗಳನ್ನು ಒಂದೆ ಟೆಂಡರ್‌ನಲ್ಲಿ ಆಹ್ವಾನಿಸಿದರೆ ಅದರಲ್ಲಿ ಮೀಸಲಾತಿಯನ್ನು ನಿಗಧಿಪಡಿಸಬಹುದೆಂಬುದನ್ನು ಸಭೆಯಲ್ಲಿ ಅವಲೋಕಿಸಲಾಯಿತು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಪರಿಶೀಲಿಸಲಾಯಿತು. ಸಧ್ಯಕ್ಕೆ ಅವಶ್ಯಕವಿರುವ 2 ಕಾಮಗಾರಿಗಳಿಗೆ ಮಾತ್ರ ಟೆಂಡರ ಆಹ್ವಾನಿಸುವ ಕುರಿತು ಚರ್ಚಿಸಲಾಯಿತು. ಅದರಂತೆ ಶಿರಹಟ್ಟಿಯಲ್ಲಿ ದಿನಸಿ ಮಳಿಗೆಗಳನ್ನು ನಿರ್ಮಿಸುವುದರಿಂದ ಆದಾಯವಾಗುವುದನ್ನು ಅನುಲಕ್ಷಿಸಿ, 1) ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 09 ದಿನಸಿ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ ಮತ್ತು 2) ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿಯ 06 ದಿನಸಿ ಮಳಿಗೆಗಳು ಹಾಗೂ ಕ್ಯಾಂಟೀನ್ ಕಟ್ಟಡ ಸುಧಾರಣೆ ಮಾಡುವ ಕಾಮಗಾರಿಗಳ ಕುರಿತು ಸಾಮಾನ್ಯ ಟೆಂಡರ್‌ನ್ನು ಅಪ್ವಾನಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ

ಈ ರೀತಿ ಕಾರ್ಯಕಲಾಪಗಳು ಜರುಗಿ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕಾರ್ಯದರ್ಶಿ | ಅಧ್ಯಕ್ಷರು |
| ಕೃ.ಉ.ಮಾ.ಸ.,ಲಕ್ಷ್ಮೇಶ್ವರ | ಕೃ.ಉ.ಮಾ.ಸ.,ಲಕ್ಷ್ಮೇಶ್ವರ |

'ನಕಲು ಪ್ರತಿ'



ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ